ನನ್ನ ಮಟ್ಟಿಗೆ ಹೇಳಬೇಕೆಂದರೆ ನನಗೆ ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಇರೋದು ಪರಿಸ್ಥಿತಿ. ಲಾಲಾಪೇಟದಲ್ಲಿದ್ದೋರು ಅಮಾಯಕರು. ಅವರನ್ನು ಅವರಿಗಾಗಿಯೇ ಮೋಸ ಮಾಡಬೇಕು. ಆದರೆ ಇಲ್ಲಿ ಹಾಗಲ್ಲ. ಚೆನ್ನಾಗಿ ಓದಿಕೊಂಡವರನ್ನು, ತುಂಬಾ ದುಡ್ಡಿರುವವರನ್ನು ಕೂಡ ತುಂಬಾ ಸೊಫಿಸ್ಟಿಕೇಟೆಡ್ ಆಗಿ ಮೋಸ ಮಾಡಬೇಕು. ಎಲ್ಲ ಸಲ ಅಲ್ಲವಾದರೂ ಬಹಳ ಸಲವಂತೂ ವಂಚನೆ ಮಾಡಬೇಕು. ಮೂಗು ಹಿಂಡಿ ಹಣ ವಸೂಲು ಮಾಡಬೇಕು. ಬರೀಪುಣ್ಯಕ್ಕೆ ಹೊಟ್ಟೆ ಕೊಯ್ಯಬೇಕು. ನಮಗೆ ಬರುವ ಶೇರ್‌ಗಾಗಿ ಪಾಪಗಳನ್ನು ಮಾಡಬೇಕು. ಕಾಣಿಸದ ಅಪರಾಧಗಳ ಮಾಡಬೇಕು. ಏನೀ ಕರ್ಮ ಅನಿಸೋದು ತುಂಬಾ ಸಲ. ಒಂದೊಂದು ಸಲ ಗಿಲ್ಟ್‌ನಿಂದ ನಿದ್ರೆ ಬರ್ತಿರಲಿಲ್ಲ.

ಆಗಲೇ ನಮ್ಮ ಮನೆಯವರಿಗೆ ರಿಯಾದ್‌ನಿಂದ ಒಳ್ಳೆ ಆಫರ್ ಬಂತು. ಬಿಗ್ ಮನಿ. ಒನ್ ಮಂಥ್ ಪೇಯ್ಡ್ ಹಾಲಿಡೇಯೊಂದಿಗೆ ನಾಲ್ಕು ವರ್ಷದ ಬಾಂಡ್ ಕೇಳಿದರು. ಹೇಗೋ ಆ ನಾಲ್ಕು ವರ್ಷ ಅಲ್ಲಿ ಉಸಿರು ಬಿಗಿಹಿಡಿದುಕೊಂಡಿದ್ದರೆ ಬಂದ ದುಡ್ಡಿನಲ್ಲಿ ಮತ್ತೆ ಇಬ್ಬರು ಮೂವರು ಫ್ರೆಂಡ್ಸ್‌ನ ಸೇರಿಸಿಕೊಂಡು ಎಲ್ಲರಂತೆ ಸಾಲ ಮಾಡಿ ನಾವು ಕೂಡ ಒಂದು ದೊಡ್ಡ ಹಾಸ್ಪಿಟಲ್ ಕಟ್ಟಬಹುದಲ್ಲ ಅಂತ ಅವರ ಆಲೋಚನೆ. ಅದೇ ಆಗಿದ್ದಾದರೆ ಹೆಚ್ಚಿನ ಪಾಪಗಳಿಂದ ಕಡಿಮೆ ಪಾಪಗಳ ಕಡೆಗಾದರೂ ಹೋಗಬಹುದೇನೋ ಅಂತ ನನ್ನ ಆಶೆ. ಅವರು ಸೌದಿಗೆ ಹೊರಟುಹೋದರು. ಇಲ್ಲಿ ನಾನೂ ನನ್ನ ಮಗನೂ ಉಳಿದುಕೊಂಡೆವು.

ಮತ್ತೆ ರೇಸು ಶುರುವಾಯಿತು. ಏನು ಗಳಿಸ್ತಿದೀವಿ ಏನು ಕಳೆದುಕೊಳ್ತಿದೀವಿ ನೋಡಿಕೊಳ್ಳಲಿಕ್ಕಾಗದಷ್ಟು ವೇಗದಲ್ಲಿ ಎರಡು ವರ್ಷ ಓಡಿದೆವು. ಇನ್ನೂ ಎಷ್ಟು ಓಡುತ್ತಿದ್ದೆವೇನೋ ಅಷ್ಟರಲ್ಲಿ ನನ್ನ ಅದೃಷ್ಟ ಖುಲಾಯಿಸಿ ಆಗಲೇ ನನ್ನ ಜೀವನದೊಳಗೆ ಒಂದು ಬೆಳಕಿನಂಥ ಕತ್ತಲೆ ಪ್ರವೇಶಿಸಿತು. ಇವತ್ತು ನಿಮ್ಮ ಮುಂದೆ ಹೀಗೆ ಕುಳಿತಿದ್ದೇನೆಂದರೆ ಆ ಕತ್ತಲೆ ಕಾರಣ' ಅಂದಳು ಸ್ವಲ್ಪ ವಿರಾಮ ತೆಗೆದುಕೊಳ್ಳುತ್ತ.

ಅದಾಗಿ ಸ್ವಲ್ಪ ಹೊತ್ತಿನವರೆಗೆ ಏಕೆ ಏನೂ ಮಾತಾಡಲಿಲ್ಲ. ಡ್ರಿಂಕ್ ಮಾಡುತ್ತ ಕುಳಿತುಬಿಟ್ಟಳು.

ನಾನು ನಿಧಾನವಾಗಿ ಕುರ್ಚಿಯಿಂದೆದ್ದು ಸಿಟೌಟ್ ಹತ್ತಿರ ಹೋಗಿ ನಿಂತುಕೊಂಡೆ ಭಾರ ಕಡಿಮೆ ಮಾಡಿಕೊಳ್ಳಲು.

ಅಲ್ಲೆಲ್ಲ ತೇವವಾಗಿತ್ತು. ಚಪ್ಪಲಿಯಿರದ ಕಾಲುಗಳಿಗೆ ನೀರಿನ ಪಸೆಯ ಅನುಭವವಾಗುತ್ತಿತ್ತು.

ಮುಖಕ್ಕೆ ಬಡಿದ ತುಂತುರಿಗೆ ಒಂದು ಸಲ ಮೈ ಜುಮುಗರಿಸಿ ನಡುಗಿತು.

ಆಕೆ ಕಡೆ ನೋಡಿದೆ. ಕುರ್ಚಿಯಲ್ಲಿ ಮುದ್ದೆಯಾಗಿ ಮುದುರಿಕೊಂಡು ಅಮಾಯಕಳಂತೆ ಕುಳಿತಿದ್ದಳು. ವೈನ್‌ನಲ್ಲಿ ನೆಂದ ತುಟಿಗಳು ಹೊಳೆಯುತ್ತಿದ್ದವು. ಆದರೆ ಅದಕ್ಕಿಂತ ಹೊಳಪು ಆಕೆ ಕತೆ ನಿರ್ವಹಿಸುವ ರೀತಿಯಲ್ಲಿತ್ತು.

ಕೊಯ್ದು ಚೂರಾಗಿಸಿ ಸೇರಿಸಿ ಹೊಲಿಯುವ ಶಸ್ತ್ರವಿದ್ಯೆಯಂಥ ಯಾವುದೋ ವಿದ್ಯೆ ಆಕೆಯ ಕತೆ ಹೇಳುವ ರೀತಿಯಲ್ಲಿತ್ತು. ಅದಕ್ಕೇ ಆಕೆ ಕತೆಯನ್ನು ತುಕಡಿ ತುಕಡಿಯಾಗಿ ಹೇಳುತ್ತಿದ್ದಳು. ಬಹುಶಃ ಈಗ ಅವನ್ನೆಲ್ಲ ಸೇರಿಸಿ ಹೊಲಿಯಬಹುದು. ಹತ್ತಿರ ಸೇರಿಸಿ ಗಂಟು ಹಾಕಬಹುದು.

'ನಿಮಗೆ ಆರ್ಥ್ರೈಟಿಸ್ ಬಗ್ಗೆ ಡೀಟೇಲ್ ಆಗಿ ಏನಾದರೂ ಗೊತ್ತಾ ಇವರೆ?' ಅಂದಳಾಕೆ ಕುಳಿತಲ್ಲಿಂದ ಕದಲದಂತೆ.

ಒಂದು ಕ್ಷಣ ಏನು ಕೇಳಿಸಿಕೊಂಡೆನೋ ಅರ್ಥವಾಗಲಿಲ್ಲ.

'ಆರ್ಥ್ರೈಟಿಸ್ ಬಗೆಗಾ? ಏನು? ಯಾಕಾ ಪ್ರಶ್ನೆ ಕೇಳಿದಿರಿ?' ಅಂದೆ ಗೊಂದಲಕ್ಕೊಳಗಾದವನಂತೆ.